159 ಸಿ6
(38)

# ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಪುಟ್ಟಣ್ಣ ಇವರ ನಿಯಮ-72 ರ ಮೇರೆಗೆ ನೀಡಿರುವ ಗಮನ ಸೆಳೆಯುವ ಸೂಚನಾ ಪತ್ರಕ್ಕೆ ಉತ್ತರ.

*********

**ವಿಷಯ:** ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 249 ಅತಿಥಿ ಉಪನ್ಯಾಸಕರು ನಕಲಿ ದಾಖಲೆಗಳನ್ನು ಸಲ್ಲಿಸಿದ್ದಾರೆ ಎಂಬ ಕಾರಣ ನೀಡಿ ಈ ಉಪನ್ಯಾಸಕರ ವಿರುದ್ಧ ಎಫ್. ಐ. ಆರ್ ದಾಖಲಿಸುವಂತೆ ಕಾಲೇಜು ಶಿಕ್ಷಣ ಆದೇಶ ಮಾಡಲಾಗಿದೆ. ಈ ಸಂಬಂಧ ಅನೇಕ ಕಾಲೇಜುಗಳಲ್ಲಿ ವರದಿ ಕೇಳಿದ್ದು, ಕೇವಲ 40% ಮಾತ್ರ ವರದಿ ಬಂದಿದ್ದು, ಇನ್ನು 60% ವರದಿ ಬಂದಿರುವುದಿಲ್ಲ. ಆದರೂ ಕೂಡ ಈ ಉಪನ್ಯಾಸಕರ ಮೇಲೆ ಎಫ್. ಐ. ಆರ್. ದಾಖಲಾಗಿರುವುದು ಸರಿಯಾದ ಕ್ರಮವಾಗಿರುವುದಿಲ್ಲ. ಯು.ಜಿ.ಸಿ. ನಿಯಮದಂತೆ ಯಾವುದೇ ಅತಿಥಿ ಉಪನ್ಯಾಸಕರು ಸ್ವಯಂ ಪ್ರೇರಿತರಾಗಿ ಶೈಕ್ಷಣಿಕ ಸಂಯೋಜಕರ ಹುದ್ದೆಗೆ ಹೋಗಲು ಇಚ್ಛೆ ಇದ್ದಲ್ಲಿ ಅಂತಹವರಿಗೆ ಶಿಕ್ಷಣ ಸಂಯೋಜಕರ ಹುದ್ದೆಗೆ ಹೋಗಲು ಅವಕಾಶ ಕಲ್ಪಿಸಿಕೊಡಬೇಕು. ಸುಮಾರು 10-15 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರನ್ನು ಪರಿಗಣಿಸದೇ ತೆಗೆದುಹಾಕಲಾಗಿದೆ. ಹಾಗೂ 2009ರಲ್ಲಿ ಎಂ.ಫಿಲ್ ಪದವಿ ಪಡೆದ ಅತಿಥಿ ಉಪನ್ಯಾಸಕರನ್ನು ಸಹ ಪರಿಗಣಿಸುವ ಕುರಿತು.

*******

**ಉತ್ತರ:**

**249 ಅತಿಥಿ ಉಪನ್ಯಾಸಕರ ನಕಲಿ ದಾಖಲೆಗಳ ಬಗ್ಗೆ:**

ಕಾಲೇಜು ಶಿಕ್ಷಣ ಇಲಾಖೆಯಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೆಚ್ಚುವರಿ ಕಾರ್ಯಭಾರಕ್ಕೆ ಅನುಗುಣವಾಗಿ ಅಗತ್ಯವಿರುವ ಅತಿಥಿ ಉಪನ್ಯಾಸಕರ ಆಯ್ಕೆ ಪ್ರಕ್ರಿಯೆ ಸಂಬಂದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿದ್ದ ರಿಟ್ ಅರ್ಜಿ ಸಂಖ್ಯೆ:23600/2023ಕ್ಕೆ ಮಾನ್ಯ ನ್ಯಾಯಾಲಯವು ದಿನಾಂಕ:05.09.2024 ರಂದು ನೀಡಿರುವ ತೀರ್ಪಿನಲ್ಲಿ ಅತಿಥಿ ಉಪನ್ಯಾಸಕರ ಆಯ್ಕೆ ಪ್ರಕ್ರಿಯೆಯಲ್ಲಿ ಯು.ಜಿ.ಸಿ. ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು (NET/SLET/Ph.D) ಪರಿಗಣಿಸುವಂತೆ ಆದೇಶಿಸಿರುತ್ತದೆ. ಸದರಿ ತೀರ್ಪಿನ ಸಂಬಂಧ ರಾಜ್ಯ ಸರ್ಕಾರವು ದಾಖಲಿಸಿದ್ದ ರಿಟ್ ಅಪೀಲು ಸಂಖ್ಯೆ:1578/2024 ನ್ನು ಮಾನ್ಯ ವಿಭಾಗೀಯ ಪೀಠವು ದಿನಾಂಕ:08.10.2025 ರಂದು ವಜಾಗೊಳಿಸಿ, ರಿಟ್ ಅರ್ಜಿ ಸಂಖ್ಯೆ:23600/2023ರಲ್ಲಿ ದಿನಾಂಕ:05.09.2024ರಂದು ನೀಡಿರುವ ತೀರ್ಪನ್ನು ಎತ್ತಿ ಹಿಡಿದಿರುತ್ತದೆ.

ಈ ಹಿನ್ನೆಲೆಯಲ್ಲಿ, 2025-26ನೇ ಸಾಲಿಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೆಚ್ಚುವರಿ ಕಾರ್ಯಭಾರಕ್ಕೆ ಅನುಗುಣವಾಗಿ ಅಗತ್ಯವಿರುವ ಅತಿಥಿ ಉಪನ್ಯಾಸಕರ ಆಯ್ಕೆ ಪ್ರಕ್ರಿಯೆಯನ್ನು ನಡೆಸಲಾಗಿದ್ದು, ಆನ್‌ಲೈನ್ ಕೌನ್ಸಲಿಂಗ್ ಮೂಲಕ ಕಾಲೇಜು ಆಯ್ಕೆ ಮಾಡಿಕೊಂಡು, ಕರ್ತವ್ಯಕ್ಕೆ ಹಾಜರಾಗಿರುವ ಅತಿಥಿ ಉಪನ್ಯಾಸಕರ ಸ್ನಾತಕೋತ್ತರ ಪದವಿ ಅಂಕಪಟ್ಟಿ ಮತ್ತು ಎನ್‌ಇಟಿ, ಎಸ್‌ಎಲ್‌ಇಟಿ, ಕೆ-ಎಸ್‌ಇಟಿ, ಪಿಹೆಚ್.ಡಿ, ಎಂ.ಫಿಲ್ ಹಾಗೂ ವಿಕಲಚೇತನ ಪ್ರಮಾಣ ಪತ್ರ ಮತ್ತು ಕಲ್ಯಾಣ ಕರ್ನಾಟಕ ಪ್ರಮಾಣ ಪತ್ರಗಳ ನೈಜತೆ ವರದಿಗಳನ್ನು ಪಡೆಯಲು ಪ್ರಾಂಶುಪಾಲರು ಅನುಸರಿಸಬೇಕಾದ ಕ್ರಮಗಳ ಕುರಿತು ಅಧಿಕೃತ ಪರಿಶೀಲನಾ ಕಾರ್ಯವಿಧಾನ Standard Operating Procedure (SOP) ಅನ್ನು ಹೊರಡಿಸಲಾಗಿರುತ್ತದೆ.

ಸ್ನಾತಕೋತ್ತರ ಪದವಿ ಅಂಕಪಟ್ಟಿ, ಎನ್‌ಇಟಿ, ಎಸ್‌ಎಲ್‌ಇಟಿ, ಕೆ-ಎಸ್‌ಇಟಿ, ಪಿಹೆಚ್.ಡಿ, ಎಂ.ಫಿಲ್ ಹಾಗೂ ವಿಕಲಚೇತನ ಪ್ರಮಾಣ ಪತ್ರ ಮತ್ತು ಕಲ್ಯಾಣ ಕರ್ನಾಟಕ ಪ್ರಮಾಣ ಪತ್ರಗಳು 'ನಕಲಿ' ಅಥವಾ 'ಅಮಾನ್ಯ' ಎಂದು ಸಾಬೀತಾದರೆ, ಸಮಿತಿಯು ತನ್ನ ಸಂಶೋಧನೆಗಳನ್ನು ವರದಿಯಲ್ಲಿ ದಾಖಲಿಸಿ, ಅತಿಥಿ ಉಪನ್ಯಾಸಕರನ್ನು ಬಿಡುಗಡೆಗೊಳಿಸಿ, ವರದಿಯನ್ನು ಇಲಾಖೆಯ EMIS ಗೆ ಅಪ್‌ಲೋಡ್ ಮಾಡುವಂತೆ ಸೂಚಿಸಲಾಗಿರುತ್ತದೆ. ಒಂದು ವೇಳೆ ಅತಿಥಿ ಉಪನ್ಯಾಸಕರು ಕಾಲೇಜು ಮಟ್ಟದ ಸಮಿತಿಯ ನಿರ್ಧಾರವನ್ನು ಪ್ರಶ್ನಿಸಿದರೆ ಅಥವಾ ಆಕ್ಷೇಪಿಸಿದರೆ ಮಾತ್ರ ಅಂತಹ ಪ್ರಕರಣಗಳನ್ನು ಹೆಚ್ಚಿನ ತನಿಖೆಗಾಗಿ ಸಂಬಂಧಿತ ಎಲ್ಲಾ ದಾಖಲಾತಿಗಳೊಂದಿಗೆ ಕೇಂದ್ರ ಕಚೇರಿಗೆ (Head Office) ವರ್ಗಾಯಿಸುವಂತೆ, ಸಮಿತಿಯ ಸಂಶೋಧನೆ/ವರದಿಯ ಆಧಾರದ ಮೇಲೆ ಕೇಂದ್ರ ಕಛೇರಿಯಿಂದ ಸಂಬಂಧಪಟ್ಟ ಕಾಲೇಜಿಗೆ ಸ್ಪಷ್ಟ ನಿರ್ದೇಶನಗಳನ್ನು ನೀಡಲಾಗುವುದು ಎಂಬುದಾಗಿ ತಿಳಿಸಲಾಗಿರುತ್ತದೆ.

ಕಾಲೇಜು ಮಟ್ಟದ ಸಮಿತಿಯ ನಿರ್ಧಾರವನ್ನು ಪ್ರಶ್ನಿಸಿ/ಆಕ್ಷೇಪಿಸಿ ಪ್ರಾಂಶುಪಾಲರಿಂದ ಸ್ವೀಕೃತವಾಗಿರುವ ಪ್ರಕರಣಗಳನ್ನು ಪರಿಶೀಲಿಸಲು ಕೇಂದ್ರ ಕಛೇರಿಯ ಹಂತದಲ್ಲಿ ಕಾಲೇಜು ಶಿಕ್ಷಣ ನಿರ್ದೇಶಕರು ಮತ್ತು ಕಾಲೇಜು ಶಿಕ್ಷಣ ಹೆಚ್ಚುವರಿ ನಿರ್ದೇಶಕರ ನೇತೃತ್ವದಲ್ಲಿ ಇಲಾಖಾ ಪರಿಶೀಲನಾ ಸಮಿತಿಗಳನ್ನು ರಚಿಸಲಾಗಿರುತ್ತದೆ.

ಅದರಂತೆ, ಕಾಲೇಜುಗಳ ಪ್ರಾಂಶುಪಾಲರುಗಳು ಇಲಾಖೆಯ EMIS ಪೋರ್ಟಲ್‌ನಲ್ಲಿ ದಾಖಲಿಸಿರುವ ಮಾಹಿತಿಯಾನುಸಾರ ಹಾಗೂ ಕೇಂದ್ರ ಕಛೇರಿ ಹಂತದ ಇಲಾಖಾ ಪರಿಶೀಲನಾ ಸಮಿತಿಯ ವರದಿಯನುಸಾರ 2025-26ನೇ ಸಾಲಿನಲ್ಲಿ ಕರ್ತವ್ಯ ನಿರ್ವಹಿಸಿ, 'ನಕಲಿ' / 'ಅಮಾನ್ಯ' ಪಿಹೆಚ್.ಡಿ ಪ್ರಮಾಣ ಪತ್ರ ಸಲ್ಲಿಸಿರುವ ಒಟ್ಟು 249 ಮತ್ತು ಪಿಹೆಚ್.ಡಿ ಒಳಗೊಂಡಂತೆ ಕ್ರಮಬದ್ಧವಲ್ಲದ ಎಂ.ಫಿಲ್. ಸೇವಾ ಪ್ರಮಾಣ ಪತ್ರ, ವಿಕಲಚೇತನ ಪ್ರಮಾಣ ಪತ್ರ ಸಲ್ಲಿಸಿರುವ ಒಟ್ಟು 39 ಅತಿಥಿ ಉಪನ್ಯಾಸಕರುಗಳ ವಿವರಗಳನ್ನು ಕ್ರಮವಾಗಿ ದಿನಾಂಕ:21-07-2026 ಮತ್ತು 31-07-2026ರ ಆಯುಕ್ತಾಲಯದ ಆದೇಶಗಳಲ್ಲಿ ಪ್ರಕಟಿಸಿ ಮುಂದಿನ ಎಲ್ಲಾ ಶೈಕ್ಷಣಿಕ ವರ್ಷಗಳ ಆಯ್ಕೆ ಪ್ರಕ್ರಿಯೆಯಿಂದ ಹೊರಗಿಡಲಾಗಿದೆ ಹಾಗೂ ಸರ್ಕಾರಕ್ಕೆ ಸುಳ್ಳು ಮಾಹಿತಿ / ದಾಖಲೆ ನೀಡಿ ವಂಚನೆ ಎಸಗಲು ಪ್ರಯತ್ನಿಸಿರುವುದರಿಂದ ಅವರುಗಳ ವಿರುದ್ಧ ಭಾರತ ನ್ಯಾಯ ಸಂಹಿತೆಯಡಿ ಅನ್ವಯವಾಗುವ ಪ್ರಾವಧಾನಗಳಡಿ ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ, ವರದಿಯನ್ನು ಒಂದು ವಾರದೊಳಗಾಗಿ ಸಲ್ಲಿಸುವಂತೆ ಹಾಗೂ ಸದರಿ ಮಾಹಿತಿಯನ್ನು ಇಲಾಖೆಯ EMIS ಪೋರ್ಟಲ್‌ನಲ್ಲಿ upload ಮಾಡುವಂತೆ ಸೂಚಿಸಲಾಗಿದೆ.

ಮೇಲಿನ ಆದೇಶಗಳಂತೆ, 2026-27ನೇ ಸಾಲಿನ ಅತಿಥಿ ಉಪನ್ಯಾಸಕರ ಆಯ್ಕೆ ಪ್ರಕ್ರಿಯೆಯಿಂದ ಹೊರಗಿಡಲಾಗಿರುವ ಕೆಲವು ಅತಿಥಿ ಉಪನ್ಯಾಸಕರು ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು, ಧಾರವಾಡ ಮತ್ತು ಕಲಬುರಗಿ ಪೀಠಗಳಲ್ಲಿ ಒಟ್ಟಾರೆ 41 ರಿಟ್ ಅರ್ಜಿಗಳನ್ನು ದಾಖಲಿಸಿರುತ್ತಾರೆ. ಅದರಲ್ಲಿ ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಪೀಠದಲ್ಲಿ ದಾಖಲಿಸಿರುವ ರಿಟ್ ಅರ್ಜಿ ಸಂಖ್ಯೆ:22759/2026 ರ ಅರ್ಜಿಯು ದಿನಾಂಕ:24.07.2026 ರಂದು ವಿಚಾರಣೆಗೆ ಬಂದಾಗ "Learned Government Advocate on instruction submits that counseling process is not yet commenced. Learned Government Advocate not to precipitate in regard to lodging of criminal case against the petitioners, till the next date of hearing" ಎಂಬುದಾಗಿ ನಿರ್ದೇಶನ ನೀಡಿದ್ದು, ಅದರಂತೆ, ಇಂತಹ ಎಲ್ಲಾ ರಿಟ್ ಅರ್ಜಿಗಳನ್ನು ರಿಟ್ ಅರ್ಜಿ ಸಂಖ್ಯೆ:23112/2026 ರೊಂದಿಗೆ ಒಟ್ಟುಗೂಡಿಸಿ, ದಿನಾಂಕ:03.08.2026 ರಂದು ಈ ಕೆಳಗಿನಂತೆ ಮಧ್ಯಂತರ ಆದೇಶ ನೀಡಿರುತ್ತದೆ;

> Learned Additional Advocate General submits that the respondents will permit the petitioners to participate in the counseling after completion of the regular counseling, who possessed Ph.D. Degree. Submission is placed on record. List the petitions after two weeks. The respondents are directed to permit the petitioners to attend the counseling as aforesaid. The appearance of the petitioners shall be subject to the outcome of these writ petitions.

ಈ ಹಿನ್ನೆಲೆಯಲ್ಲಿ, ಒಟ್ಟು 41 ರಿಟ್ ಅರ್ಜಿಗಳಲ್ಲಿ ನೀಡಿರುವ ಮಧ್ಯಂತರ ಆದೇಶದಂತೆ ಸದರಿ ರಿಟ್ ಅರ್ಜಿದಾರರು/ಅತಿಥಿ ಉಪನ್ಯಾಸಕರನ್ನು ಮಾನ್ಯ ನ್ಯಾಯಾಲಯದ ಮುಂದಿನ ಆದೇಶದ ಷರತ್ತಿಗೊಳಪಟ್ಟು ಅತಿಥಿ ಉಪನ್ಯಾಸಕರ ಆಯ್ಕೆಯ ಆನ್‌ಲೈನ್ ಕೌನ್ಸಲಿಂಗ್‌ನಲ್ಲಿ ಭಾಗವಹಿಸಲು ಅನುಮತಿಸಲಾಗಿದ್ದು, ಅದರಂತೆ ಅವರು ಆಯ್ಕೆ ಮಾಡಿಕೊಂಡಿರುವ ಕಾಲೇಜುಗಳಿಗೆ ಕರ್ತವ್ಯಕ್ಕೆ ಹಾಜರಾಗಲು ಅವಕಾಶ ನೀಡಲಾಗಿದೆ ಹಾಗೂ ಮಾನ್ಯ ನ್ಯಾಯಾಲಯದ ಮಧ್ಯಂತರ ಆದೇಶದಂತೆ ಕ್ರಮ ವಹಿಸಲು ಪ್ರಾದೇಶಿಕ ಜಂಟಿ ನಿರ್ದೇಶಕರು ಹಾಗೂ ಪ್ರಾಂಶುಪಾಲರುಗಳಿಗೆ ಸೂಚನೆ ನೀಡಲಾಗಿದೆ.

**ಶೈಕ್ಷಣಿಕ ಸಂಯೋಜಕರ ಆಯ್ಕೆ ಕುರಿತು:**

ಕಾಲೇಜು ಶಿಕ್ಷಣ ಇಲಾಖೆಯಲ್ಲಿ ದೀರ್ಘಕಾಲದಿಂದ ಸೇವೆ ಸಲ್ಲಿಸುತ್ತಿದ್ದು, ಯು.ಜಿ.ಸಿ. ನಿಗಧಿತ Ph.D/ NET / K-SET ಅರ್ಹತೆ ಪಡೆಯದಿರುವ ಅತಿಥಿ ಉಪನ್ಯಾಸಕರಿಗೆ 2026-27ನೇ ಶೈಕ್ಷಣಿಕ ಸಾಲಿನಿಂದ ಜಾರಿಗೆ ಬರುವಂತೆ ಉನ್ನತ ಶಿಕ್ಷಣ ಇಲಾಖೆ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು, ಇಂಜಿನಿಯರಿಂಗ್ ಕಾಲೇಜುಗಳು ಹಾಗೂ ಪಾಲಿಟೆಕ್ನಿಕ್‌ಗಳಲ್ಲಿ "ಶೈಕ್ಷಣಿಕ ಸಂಯೋಜಕರು" ಗಳನ್ನಾಗಿ ಮುಂದಿನ 03 ವರ್ಷಗಳಿಗೆ ತಾತ್ಕಾಲಿಕವಾಗಿ ಬಳಸಿಕೊಳ್ಳಲು ಸರ್ಕಾರವು ಆದೇಶ ಸಂಖ್ಯೆ:ಇಡಿ 38 ಡಿಸಿಇ 2026 (ಇ), ದಿನಾಂಕ:30.04.2026 ರಲ್ಲಿ ಕೆಲವು ಷರತ್ತು/ನಿಬಂಧನೆಗಳಿಗೊಳಪಟ್ಟು ಅನುಮೋದನೆ ನೀಡಲಾಗಿದೆ.

ಈ ಯೋಜನೆಯನ್ನು 2026-27ನೇ ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಲು ಉದ್ದೇಶಿಸಲಾಗಿದ್ದು, ಅದರಂತೆ, 2026-27ನೇ ಶೈಕ್ಷಣಿಕ ಸಾಲಿನಲ್ಲಿ ನಡೆಯುವ ಅತಿಥಿ ಉಪನ್ಯಾಸಕರ ಆಯ್ಕೆ ಪ್ರಕ್ರಿಯೆಯಲ್ಲಿ ಹೆಚ್ಚುವರಿ ಬೋಧನಾ ಕಾರ್ಯಭಾರಕ್ಕೆ ಅನುಗುಣವಾಗಿ ಯು.ಜಿ.ಸಿ. ನಿಗದಿತ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ಆಯ್ಕೆಗೊಂಡ ನಂತರ ಹಾಗೂ ಕೆಲವು ವಿಷಯಗಳಲ್ಲಿ ಯು.ಜಿ.ಸಿ. ನಿಗದಿತ ವಿದ್ಯಾರ್ಹತೆಯ ಅಭ್ಯರ್ಥಿಗಳ ಅಲಭ್ಯತೆಯಿಂದಾಗಿ ಯು.ಜಿ.ಸಿ. ನಿಗದಿತ ವಿದ್ಯಾರ್ಹತೆ ಹೊಂದಿರದ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಂಡ ನಂತರವೂ, ಅತಿಥಿ ಉಪನ್ಯಾಸಕರ ಆಯ್ಕೆ ಪ್ರಕ್ರಿಯೆಯಿಂದ ಹೊರಗುಳಿಯುವ ಯು.ಜಿ.ಸಿ. ನಿಗದಿತ ವಿದ್ಯಾರ್ಹತೆ ಹೊಂದಿರದ ಅತಿಥಿ ಉಪನ್ಯಾಸಕರಿಗೆ ಅವರ ಅಭಿಮತದ ಮೇರೆಗೆ ಈ ಯೋಜನೆಯು ಅನ್ವಯವಾಗಲಿದೆ. ಅದರಂತೆ, ಪ್ರಸ್ತುತ 2026-27ನೇ ಸಾಲಿನಲ್ಲಿ ಅಗತ್ಯವಿರುವ ಅತಿಥಿ ಉಪನ್ಯಾಸಕರ

ಆಯ್ಕೆ ಪ್ರಕ್ರಿಯೆಯು ಜಾರಿಯಲ್ಲಿದ್ದು, ಈ ಪ್ರಕ್ರಿಯೆ ಮುಗಿದ ನಂತರ ದಿನಾಂಕ:30.04.2026 ರ ಸರ್ಕಾರದ ಆದೇಶದನ್ವಯ ಶೈಕ್ಷಣಿಕ ಸಂಯೋಜಕರನ್ನು ಆಯ್ಕೆ ಮಾಡಿಕೊಳ್ಳಲು ಕ್ರಮವಹಿಸಲಾಗುವುದು.

ಈ ಯೋಜನೆಯಡಿ ಆಯ್ಕೆಯಾಗುವ ಶೈಕ್ಷಣಿಕ ಸಂಯೋಜಕರಿಗೆ ಮಾಹೆಯಾನ ರೂ.28,000/- (ಅತಿಥಿ ಉಪನ್ಯಾಸಕಾಗಿ 05 ರಿಂದ 10 ವರ್ಷಗಳ ಸೇವಾ ಅನುಭವ), ರೂ.29,000/- (ಅತಿಥಿ ಉಪನ್ಯಾಸಕಾಗಿ 10 ವರ್ಷ ಮೇಲ್ಪಟ್ಟು ಮತ್ತು 15 ವರ್ಷಗಳವರೆಗೆ ಸೇವಾ ಅನುಭವ) ಮತ್ತು ರೂ.30,000/- (ಅತಿಥಿ ಉಪನ್ಯಾಸಕಾಗಿ 15 ವರ್ಷ ಮೇಲ್ಪಟ್ಟು ಸೇವಾ ಅನುಭವ) ಗಳನ್ನು ನಿಗಧಿಪಡಿಸಲಾಗಿದೆ.

**ಸುಮಾರು 10-15 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರನ್ನು ಪರಿಗಣಿಸುವ ಕುರಿತು:**

ಅತಿಥಿ ಉಪನ್ಯಾಸಕರ ಆಯ್ಕೆ ಪ್ರಕ್ರಿಯೆಯಲ್ಲಿ ಯು.ಜಿ.ಸಿ. ನಿಗಧಿತ ವಿದ್ಯಾರ್ಹತೆಯನ್ನು ಪರಿಗಣಿಸುವಂತೆ ಮಾನ್ಯ ಉಚ್ಛ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:23600/2023 ರಲ್ಲಿ ನಿರ್ದೇಶನ ನೀಡಿರುತ್ತದೆ. ಅದರಂತೆ, ಸುಮಾರು 10-15 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ಅನುಭವಿ ಅತಿಥಿ ಉಪನ್ಯಾಸಕರಿಗೆ ಯು.ಜಿ.ಸಿ. ವಿದ್ಯಾರ್ಹತೆಯೊಂದಿಗೆ ಅವರ ಸೇವಾ ಅನುಭವವನ್ನು ಪರಿಗಣಿಸಿ ಪ್ರತಿ ವರ್ಷ ನಡೆಯುವ ಆನ್‌ಲೈನ್ ಕೌನ್ಸಲಿಂಗ್‌ನಲ್ಲಿ ಒಂದು ವರ್ಷದ ಸೇವಾ ಅನುಭವಕ್ಕೆ 03 ಅಂಕಗಳ ಆಧಾರದಲ್ಲಿ ಗರಿಷ್ಟ 48 ಅಂಕಗಳವರೆಗೆ ಕೃಪಾಂಕ (Weightage) ನೀಡುವ ಮೂಲಕ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

**2009 ರ ಎಂ.ಫಿಲ್ ಪದವಿಯನ್ನು ಪರಿಗಣಿಸುವ ಕುರಿತು:**

ಅತಿಥಿ ಉಪನ್ಯಾಸಕರನ್ನು ಪ್ರತಿ ವರ್ಷ ಹೊಸದಾಗಿ ನೇಮಕ ಮಾಡಿಕೊಳ್ಳುವುದರಿಂದ, ನೇಮಕ ಮಾಡಿಕೊಳ್ಳುವ ವರ್ಷದಲ್ಲಿ ಜಾರಿಯಲ್ಲಿರುವ ಯು.ಜಿ.ಸಿ. ನಿಯಮಗಳಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆಯ ನೇಮಕಾತಿಗೆ ನಿಗಧಿಪಡಿಸಿರುವ ವಿದ್ಯಾರ್ಹತೆಯನ್ನು ಪರಿಗಣಿಸಲಾಗುತ್ತಿದೆ. ಅದರಂತೆ, ಪ್ರಸ್ತುತ ಜಾರಿಯಲ್ಲಿರುವ 2018 ರ ಯು.ಜಿ.ಸಿ. ನಿಯಮಗಳಲ್ಲಿ ಎಂ.ಫಿಲ್ ಪದವಿಯನ್ನು ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ವಿದ್ಯಾರ್ಹತೆಯಾಗಿ ನಿಗದಿಪಡಿಸಿರುವುದಿಲ್ಲ.

ಆದ್ದರಿಂದ, ಯು.ಜಿ.ಸಿ. ನಿಯಮದ ಪ್ರಕಾರ ದಿನಾಂಕ:11.07.2009 ರ ಒಳಗಾಗಿ ಪಡೆದುಕೊಂಡಿರುವ ಎಂ.ಫಿಲ್. ಪದವಿಯನ್ನು NET/SLET/K-SET ಪರೀಕ್ಷೆಯಿಂದ ವಿನಾಯಿತಿ ಮತ್ತು ಸಮಾನ ವಿದ್ಯಾರ್ಹತೆಯಾಗಿ ಪರಿಗಣಿಸಲು ಪ್ರಸ್ತುತ ಅವಕಾಶವಿಲ್ಲದಿರುವುದರಿಂದ ದಿನಾಂಕ:11.07.2009 ರೊಳಗಾಗಿ ಪಡೆದಿರುವ ಎಂ.ಫಿಲ್ ಪದವಿಯನ್ನು NET/SLET/K-SET/Ph.D ಗೆ ಸಮನಾಂತರ ಎಂಬುದಾಗಿ ಪರಿಗಣಿಸುವ ವಿಷಯವು ಯು.ಜಿ.ಸಿ ವ್ಯಾಪ್ತಿಗೆ ಒಳಪಡುವುದರಿಂದ ಈ ಬಗ್ಗೆ ಸ್ಪಷ್ಟೀಕರಣ ಕೋರಿ ದಿನಾಂಕ:29.03.2025 ಹಾಗೂ ದಿನಾಂಕ:14.08.2025 ರಂದು ಎರಡು ಬಾರಿ ಯು.ಜಿ.ಸಿ.ಗೆ ಪತ್ರ ಬರೆಯಲಾಗಿತ್ತು.

ಸದರಿ ಪತ್ರಗಳಿಗೆ ಸಂಬಂಧಿಸಿಂತೆ, ಯು.ಜಿ.ಸಿ. ಯು ಪತ್ರ ಸಂಖ್ಯೆ:F.-56/2025 (PS/Misc.). Date:24.11.2025 ರಲ್ಲಿ "It is further clarified that no exemption has been provided with regard to the prescribed qualification requirements for Guest Faculty. It is a well-established principle that the rules applicable for appointments are those in force at the time of appointment. Accordingly, for the engagement of Guest Faculty at present, the eligibility conditions stipulated under the UGC Regulations, 2018 shall apply. These regulations do not provide any exemption from NET for candidates possessing an M.Phil. qualification." ಎಂಬುದಾಗಿ ಸ್ಪಷ್ಟೀಕರಣ ನೀಡಿದ್ದು, ಅದರನ್ವಯ ಎಂ.ಫಿಲ್ ಪದವಿಯನ್ನು NET/SLET/K-SET/Ph.D ಗೆ ಸಮಾನಂತರ ಎಂಬುದಾಗಿ ಪರಿಗಣಿಸಲು ಅವಕಾಶವಿರುವುದಿಲ್ಲ.

**ಇಡಿ 263 ಡಿಸಿಇ 2026 (ಇ)**

**(ಬಸವರಾಜ ರಾಯರೆಡ್ಡಿ)**
ಉನ್ನತ ಶಿಕ್ಷಣ ಸಚಿವರು